

‘ಈಸೋಫೇಗಲ್ ರಿಫ್ಲೆಕ್ಸ್’

ನಮ್ಮಲ್ಲಿ ಮ್ಯೂಸಿಯಂಗಳ ಕಲ್ಪನೆ ಬಲವಾಗಿಲ್ಲ. ನಾನು ಈಗ ವಾಸವಾಗಿರುವ ಕೊರಿಯಾ ತಕ್ಕೊಳ್ಳಿ. ಕರ್ನಾಟಕದ ಅರ್ಧ ಭಾಗ ಇರುವ ದೇಶ. ಈ ದೇಶದಲ್ಲಿ ಸಾಧಾರಣ ಮುನ್ನೂರು ಮ್ಯೂಸಿಯಂ ಮತ್ತು ಆರ್ಟ್ ಗ್ಯಾಲರಿಗಳಿವೆ. ಅದು ಕಲಾಕೃತಿ ರಚನೆ ಮತ್ತು ಚರಿತ್ರೆಯನ್ನು ಆರ್ಕೈವ್ ಆಗುವಂತೆ ನೋಡಿಕೊಳ್ತದೆ. ನಮ್ಮ ದೇಶ ಕೊರಿಯಾದ ಮೂವತ್ತಾರು ಪಟ್ಟು ದೊಡ್ಡದು. ನಮ್ಮಲ್ಲಿ ಹೆಚ್ಚೆಂದರೆ 50 ಆಕ್ಟೀವ್ ಮ್ಯೂಸಿಯಂ ಮತ್ತು ಗ್ಯಾಲರಿಗಳಿವೆ. ಇಂತಹ ಹೊತ್ತಲ್ಲಿ ಪ್ರೈವೇಟ್ ಮತ್ತು ಪಬ್ಲಿಕ್ ಮ್ಯೂಸಿಯಂಗಳ ಅಗತ್ಯವಿದೆ. ಈ ತರಹದ ಖಾಸಗಿ ಮ್ಯೂಸಿಯಂಗಳು ಆರಂಭವಾಗೋದರಿಂದ, ಚರ್ಚೆ ಮಾಡಕ್ಕೆ ಒಂದು ವೇದಿಕೆ ಸೃಷ್ಟಿಯಾಗುತ್ತೆ. ವೇದಿಕೆಯನ್ನ ಹೇಗೆ ಉಪಯೋಗ ಮಾಡ್ಕೊಳ್ಳಬೇಕು, ಹೇಗೆ ಮುಂದುವರಿಸಬೇಕು ಅನ್ನೋದು ನಮ್ಮ ಕೈಯಲ್ಲಿದೆ. ಈಗ ದೊಡ್ಡ ಹೆದರಿಕೆ ಏನಂತಂದ್ರೆ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಬರ್ತಾ ಇದೆ. ನಾವು ಒಂದು ಅಪ್ರಸ್ತುತ ವರ್ಗ ಆಗಬಹುದು. ನಾವು ಸಣ್ಣವರಿರುವಾಗ ಕ್ರಿಕೆಟ್ ಆಡ್ಲಿಕ್ಕೆಲ್ಲ ಹೋಗುತ್ತಿದ್ದೆವು. ಆವಾಗ ಅಮ್ಮ ‘ಈ ಸಣ್ಣ ಮಕ್ಕಳನ್ನೆಲ್ಲ ಆಟಕ್ಕೆ ಕರ್‌ಕೊ. ಇಲ್ಲ ಅಂದರೆ ಆಡ್ಲಿಕ್ಕೆ ಬಿಡಲ್ಲ’ ಅಂತ ಹೇಳ್ತಾ ಇದ್ದರು. ನಾವು ಆ ಮಕ್ಕಳನ್ನೆಲ್ಲ ಕರ್ಕೊಂಡು ‘ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲ’ ಅಂತ ಹೇಳ್ತಿದ್ದೆವು. ನಮ್ಮ ಪರಿಸ್ಥಿತಿ ಹೀಗಿದೆ. ಜಗತ್ತಿನ ಸನ್ನಿವೇಶದಲ್ಲಿ. ಅವರಿಗೆ ನಮ್ಮ ಅಗತ್ಯ ಇಲ್ಲ ಅಥವಾ ಅಗತ್ಯ ತೋರ್ಪಡಿಸಲ್ಲಿಕ್ಕೆ ನಮ್ಮ ಹತ್ರ ತಾಕತ್ತಿಲ್ಲ.

◆ **‘ಮ್ಯಾಪ್’ ಮ್ಯೂಸಿಯಂನಲ್ಲಿ ನಿಮ್ಮ ಯಾವ ಕಲಾಕೃತಿಗಳು ಪ್ರದರ್ಶನಕ್ಕಿವೆ?**

ಅಲ್ಲಿ ನಾನು ಮಾಡುವ ಪ್ರದರ್ಶನಕ್ಕೆ ‘ಚಿರಾಗ್ ಎ ಅಲ್’ ಅಂತ ಟೈಟಲ್ ಕೊಟ್ಟಿದ್ದೇನೆ. ಇದರ ಕೋರ್